8. ಅನುಬಂಧ-1

ಶ್ರೀ ರುದ್ರೇಶಗೌಡ.ವೈ.ಎನ್ (ಬೇಲೂರು)

105 : (76)

ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ) ರಾಜ್ಯದಲ್ಲಿ ಹೊಸದಾಗಿ ಬಿ.ಪಿ.ಎಲ್.ಪಡಿತರ ಚೀಟಿಯನ್ನು ಬಡವರಿಗೆ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಡವರಿಗೆ ಬಿ.ಪಿ.ಎಲ್.ಕಾರ್ಡ್ ವಿತರಣೆ ಯಾಗದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಬಗ್ಗೆ ಹೊಸದಾಗಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ; ಹಾಗೂ ಯಾವಾಗ ಹೊಸದಾಗಿ ಬಿ.ಪಿ.ಎಲ್. ಕಾರ್ಡ್ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು? (ಮಾಹಿತಿ ನೀಡುವುದು)

ಶ್ರೀ ಡಿ.ಎನ್.ಜೀವರಾಜ್ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಇಲ್ಲ. ಎಲ್ಲಾ ಅರ್ಹರಾದವರಿಗೆ BPL ಪಡಿತರ ಚೀಟಿಗಳನ್ನು ನೀಡಲಾಗುತ್ತಿದೆ. ಈವರೆಗೆ 88,17,988 ಕುಟುಂಬಗಳಿಗೆ BPL ಮತ್ತು 11,05,677 ಕುಟುಂಬಗಳಿಗೆ ಅಂತ್ಯೋದಯ ಕಾರ್ಡುಗಳನ್ನು ನೀಡಲಾಗಿದೆ.

ಆ) ಈ ಹಿಂದೆ ಅನೇಕ ಬಡವರಿಗೆ BPL ಪಡಿತರ ಚೀಟಿ ನೀಡಲಾಗಿರಲಿಲ್ಲ ಎನ್ನುವ ಕಾರಣಕ್ಕಾಗಿ 'ಆನ್‌ಲೈನ್' ಆಗಿ ಅರ್ಜಿಗಳನ್ನು ಸ್ವೀಕರಿಸಿ ಪಡಿತರ ಚೀಟಿಗಳನ್ನು ನೀಡಲಾಗುತ್ತಿದೆ. ಕಳೆದ ಒಂದು ವರ್ಷದಲ್ಲಿ ನೀಡಿದ ಸುಮಾರು 8.05 ಲಕ್ಷ ಪಡಿತರ ಚೀಟಿಗಳ ಪೈಕಿ ಸುಮಾರು 4.8 ಲಕ್ಷ ಪಡಿತರ ಚೀಟಿಗಳು BPL ಆಗಿರುತ್ತವೆ. ಸುಮಾರು 1.9 ಲಕ್ಷ BPL ಪಡಿತರ ಚೀಟಿಗಳು ನೀಡಲು ಸಿದ್ದವಾಗಿದ್ದು, ಅರ್ಜಿದಾರರು ಬಂದು ಸ್ವೀಕರಿಸಬೇಕಾಗಿದೆ. ಸುಮಾರು 28,000 BPL ಪಡಿತರ ಚೀಟಿ ಕೋರಿ ಬಂದ ಅರ್ಜಿಗಳು ವಿವಿಧ ಹಂತಗಳಲ್ಲಿ ಪರಿಶೀಲನೆಯಲ್ಲಿ ಇರುತ್ತವೆ. ಅವುಗಳನ್ನು ಸಹ ಆದಷ್ಟು ಬೇಗನೆ ನೀಡಲಾಗುವುದು.

ಇ) ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸಲು ಮತ್ತೆ ಅವಕಾಶವನ್ನು ಆನ್‌ಲೈನ್ ಮೂಲಕ ಸದ್ಯದಲ್ಲಿಯೆ ನೀಡಲಾಗುವುದು. ಆಗ ಬಿಪಿಎಲ್ ಪಡಿತರ

ಚೀಟಿಗೆ ಅರ್ಹರಾಗಿದ್ದು, ಪಡೆಯದೇ ಇರುವ ಎಲ್ಲಾ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಬಹುದು.

ಕಾರಾಗೃಹ ಕಟ್ಟಡ ನಿರ್ಮಾಣ

.ಶ್ರೀ ಸುನೀಲ್ ವಿ.ಹೆಗಡೆ (ಹಳಿಯಾಳ)

110 : (188)

ಮಾನ್ಯ ಸಮಾಜ ಕಲ್ಯಾಣ, ಬಂದಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಕಾರಾಗೃಹ ಕಟ್ಟಡ ಮಂಜೂರಾತಿ ನೀಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಮೀಸಲಿಟ್ಟ ಜಮೀನು ಎಷ್ಟು; ಹಾಗೂ ಕಾಮಗಾರಿಗೆ ಮಂಜೂರಾದ ಹಣವೆಷ್ಟು; ಖರ್ಚಾದ ಹಣವೆಷ್ಟು? (ಪೂರ್ಣ ಮಾಹಿತಿ ನೀಡುವುದು)

ಶ್ರೀ ಎ.ನಾರಾಯಣಸ್ವಾಮಿ (ಸಮಾಜ ಕಲ್ಯಾಣ, ಬಂದಿಖಾನೆ ಸಚಿವರು)

ಅ) ಇಲ್ಲ

ಆ) ಕೃಷಿ ಇಲಾಖೆಗೆ ಸೇರಿದ ಗುಡ್ನಾಪುರ ಬ್ಲಾಕ್ ನಂ.26 ರಲ್ಲಿನ 22.03 ಎಕರೆ ಜಮೀನಿನಲ್ಲಿ 20.00 ಎಕರೆಯನ್ನು ಮಂಜೂರು ಮಾಡುವಂತೆ ಕೃಷಿ ಇಲಾಖೆಯವರನ್ನು ಕೋರಲಾಗಿತ್ತು. ಆದರೆ ಸದರಿ ಜಮೀನಿನಲ್ಲಿ 10.00 ಎಕರೆ ಜಮೀನನ್ನು ಈಗಾಗಲೇ ಗುತ್ತಿಗೆ ಆಧಾರದ ಮೇಲೆ ಜಲಾನಯನ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ಬಾಕಿ ಉಳಿದ 10.00 ಎಕರೆ ಜಮೀನಿನಲ್ಲಿ ಜೈವಿಕ ಇಂಧನ ಸಸ್ಯಗಳನ್ನು ಬೆಳೆಸಲು ಹಾಗೂ ಬೀಜೋತ್ಪಾದನೆ ಕೈಗೊಳ್ಳಲು ಜಮೀನು ಬೇಕಾಗಿರುವುದರಿಂದ 10.00 ಎಕರೆ ಜಮೀನನ್ನು ಕಾರಾಗೃಹ ಇಲಾಖೆಗೆ ನೀಡಲು ಸಾಧ್ಯವಿಲ್ಲವೆಂದು ಕೃಷಿ ಇಲಾಖೆ ತಿಳಿಸಿದೆ.

ಹಳಿಯಾಳದಲ್ಲಿ ನೂತನ ತಾಲ್ಲೂಕು ಉಪಕಾರಾಗೃಹವನ್ನು ನಿರ್ಮಿಸಲು ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ, ಕಾರವಾರ ರವರಿಗೆ 20.00 ಎಕರೆಯಷ್ಟು ಜಮೀನನ್ನು ಮಂಜೂರು ಮಾಡುವಂತೆ ಕೋರಲಾಗಿದ್ದು, ಇನ್ನೂ ಜಮೀನು ಮಂಜೂರು ಆಗಿರುವುದಿಲ್ಲ.